ನೋಡಿಕೊಂಡು ಉತ್ತರ ಕೊಡುವುದು ಒಳ್ಳೆಯದು. ಇದುವರೆಗೂ ಎಲ್ಲಿಯೂ ಕೂಡ ಅವರಿಗೆ ಪ್ರವೇಶ ಕೊಟ್ಟಿಲ್ಲ. ಆ ರೀತಿ ಕೊಟ್ಟಿದ್ದರೆ, ಇಂತಿಂಥ ಕಡೆಗಳಲ್ಲಿ ಕೊಟ್ಟಿದ್ದೇವೆಂದು ಹೇಳಲಿ.

ಶ್ರೀ ಜಿ. ಬಸವಣ್ಣಪ್ಪ.—ಶಾಲಾಕಾಲೇಜುಗಳ ಸಂಖ್ಯೆ ಜಾಸ್ತಿಯಾಗಿದೆ ಅದೇ ರೀತಿ ವಿದ್ಯಾರ್ಥಿ ನಿಲಯಗಳ ಸಂಖ್ಯೆಯೂ ಸಹ ಜಾಸ್ತಿಯಾಗಿದೆ. ನಾವು ಒಂದು ತತ್ವದ ಆಧಾರದ ಮೇಲೆ ಹೋಗುವಾಗ ಅನುತ್ತೀರ್ಣರಾದಂಥ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡುವುದಾದರೆ ಹೊಸದಾಗಿ ಸೇರತಕ್ಕವರಿಗೆ ಬಹಳ ಕಷ್ಟವಾಗುತ್ತದೆ. ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮರು ಪ್ರವೇಶಕ್ಕೆ ಅವಕಾಶವಿದೆ. ಆದರೆ ತತ್ವ ನಿಷ್ಠೆಯಿಂದ ಆದಷ್ಟೂ ಹೊಸದಾಗಿ ಬಂದಿರತಕ್ಕವರಿಗೆ ಕೊಡತಕ್ಕ ವ್ಯವಸ್ಥೆ ಇದೆ. ಫೆಲಾದವರಲ್ಲಿ ಅತೀ ಬಡಕುಟುಂಬದಿಂದ ಬಂದಂತವರಿಗೆ ಅವಕಾಶ ಇದೆ. ಈ ನೀತಿಯನ್ನು ನಾವು ಅನುಸರಿಸುತ್ತಿದ್ದೇವೆ. ಆದರೆ ಮೆಟ್ರಿಕ್ ನಂತರ ಫೇಲಾದ ಹುಡುಗರಿಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕೆ ಅವಕಾಶ ಇರಲಿಲ್ಲ. ಇದಕ್ಕಾಗಿ ಇದ್ದ ರೂಲ್ಸನ್ನು ಕಳೆದವರ್ಷ ಮಾತ್ರ ರಿಲ್ಯಾಕ್ಸ್ ಮಾಡಿದ್ದೆವು. ಆದರೆ ಮಾನ್ಯ ವೆಂಕಟರಾಮಯ್ಯನವರು ಈಗ ಈ ರೂಲನ್ನೇ ತೆಗೆದು ಹಾಕಬೇಕೆಂದು ಕೇಳಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತೇವೆ.

ತಾಲ್ಲೂಕು ಮಾರುಕಟ್ಟೆ ಸಂಘಗಳ ಬಗ್ಗೆ

೫೫ (೧೦೩) ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ :—

ತಾಲ್ಲೂಕು ಮಾರುಕಟ್ಟೆ ಸಂಘಗಳಾಗಿರಲು ಯಾವ ಯಾವ ಗುಣಗಳನ್ನು ಹೊಂದಿರಬೇಕು ಹಾಗೂ ಕಳೆದ ೭೦ ವರ್ಷಗಳಿಂದಲೂ ತಾಲ್ಲೂಕು ಮಾರುಕಟ್ಟೆ ಸಂಘಗಳಾಗಿ ಕೆಲಸ ಮಾಡುತ್ತಾ ಬಂದಿರುವ ಸಂಘಗಳು ಈಗ ಒಮ್ಮೆಲೆ ಬದಲಾಗಿದೆಯೆಂದು ಸಾರಲು ಕಾರಣಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಈ ಕೆಳಗೆ ಕಾಣಿಸಿದ ಗುಣಗಳನ್ನು ಹೊಂದಿದ ಮಾರುಕಟ್ಟೆ ಸಹಕಾರ ಸಂಘಗಳನ್ನು ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘಗಳೆಂದು ಪರಿಗಣಿಸಲಾಗುವುದು:—

೧. ಸಂಘದ ಕಾರ್ಯಕ್ಷೇತ್ರ ಆಯಾ ತಾಲ್ಲೂಕಿಗೆ ಪರಿಮಿತವಾಗಿರಬೇಕು.

೨. ಸಂಘವು ಮುಖ್ಯವಾಗಿ ರೈತ ಸದಸ್ಯರ ವ್ಯವಸಾಯೋತ್ಪನ್ನಗಳನ್ನು ಮಾರಾಟ ಮಾಡುವ ಉದ್ದೇಶ ಹೊಂದಿರಬೇಕು.

೩. ತನಗೆ ಸಮಾವೇಶಗೊಂಡ ಪ್ರಾಥಮಿಕ ಕೃಷಿ ಸಾಲ ಸಂಘಗಳ ಮುಖಾಂತರ ರಾಸಾಯನಿಕ ಗೊಬ್ಬರ, ಬಿತ್ತನೆ ಬೀಜಗಳು ಮತ್ತು ಕೃಷಿ ಉತ್ಪಾದನೆಗೆ ಬೇಕಾದ ಇತರೇ ಎಲ್ಲಾ ಸಲಕರಣೆಗಳನ್ನು ಪೂರೈಸುವ ವ್ಯವಹಾರದಲ್ಲಿ ತೊಡಗಿರಬೇಕು.

೪. ಪತ್ತು ಹಾಗೂ ಮಾರಾಟ ಜೋಡಣೆಯು ಕಾರ್ಯ ಕ್ರಮದ ಅಂಗವಾಗಿ ಕೃಷಿ ಉತ್ಪಾದನೆಗೆಂದು ನೀಡಿದ ಬೆಳೆ ಸಾಲವನ್ನು ಪ್ರಾಥಮಿಕ ಕೃಷಿಸಾಲ ಸಂಘಗಳ ಪರವಾಗಿ ವಸೂಲು ಮಾಡುವ ಕಾರ್ಯದಲ್ಲಿ ತೊಡಗಿರಬೇಕು.

೫. ಸದಸ್ಯರ ಕೃಷಿ ಉತ್ಪತ್ತಿ ಆಧಾರದ ಮೇಲೆ ಅದವು ಸಾಲಗಳನ್ನು ಮಂಜೂರು ಮಾಡುವ ಕಾರ್ಯದಲ್ಲಿ ಕೈಗೊಂಡಿರಬೇಕು, ಮತ್ತು

೬. ತನಗೆ ಸಮಾವೇಶವಾದ ಪ್ರಾಥಮಿಕ ಕೃಷಿಸಾಲ ಸಂಘಗಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮ ಪಡುತ್ತಿರಬೇಕು.

ಮೇಲಿನ ಧ್ಯೇಯೋದ್ದೇಶಗಳಿಗೆ ಮತ್ತು ಕಾರ್ಯ ಚಟುವಟಿಕೆಗಳಿಗೆ ಪೂರಕವಾಗಿ ಕೃಷಿ ಉತ್ಪತ್ತಿಯ ಪರಿಷ್ಕರಣ ಮೊದಲಾದ ಚಟುವಟಿಕೆಗಳನ್ನು ಈ ಸಂಘಗಳು ಕೈಗೊಳ್ಳಬಹುದು.

ಸನ್ ೧೯೬೪ರಲ್ಲಿ ರಚಿತವಾಗಿದ್ದ ದಾಂತ್ವಾಲ ಕಮಿಟಿಯ ತಿಫಾರಸ್ಸಿಗೆ ಅನುಗುಣವಾಗಿ, ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದಿವೆ. ಆದರೆ ಹತ್ತಿ, ಅಡಿಕೆ, ಕಾಫಿ, ಯಾಲಕ್ಕಿ ಮೊದಲಾದ ವಿಶಿಷ್ಟವಾದ ಸರಕು ಮಾರಾಟ ಸಹಕಾರ ಸಂಘಗಳು ನಮ್ಮ ರಾಜ್ಯದಲ್ಲಿ ಕಳೆದ ೭೦ ವರ್ಷಗಳಿಂದಲೂ ಕಾರ್ಯವಹಿಸುತ್ತಿರುವುದು ನಿಜವಾದ ಸಂಗತಿ.

ಸರ್ಕಾರದ ಕಾರ್ಯನೀತಿಗನುಗುಣವಾಗಿ, ಇತ್ತೀಚೆಗೆ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘಗಳಿಗೆ ಮತ್ತು ಕರ್ನಾಟಕ ರಾಜ್ಯ ಮಹಾ ಮಂಡಲಗಳಿಗೆ ಮಾದರಿ ಉಪನಿಯಮಗಳನ್ನು ಗೊತ್ತುಪಡಿಸಲಾಗಿದೆ. ಇದನ್ನು ಬಿಟ್ಟರೆ, ಇವುಗಳ ಕಾರ್ಯಸ್ವರೂಪದಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಒಂದು ವಿಚಾರ ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಆ ವಿಚಾರ ಎಂದರೆ ಹತ್ತಿ ವಿಚಾರ. ಈ ಹತ್ತಿಯ ವಿಚಾರದಲ್ಲಿ ಹೇಳುವುದಾದರೆ, ಹತ್ತಿ ಮಾರಾಟ ಸಂಘ ಎಂದು ಹೆಸರಿಟ್ಟಿದ್ದರೂ ಸಹ ಅದು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ಎಲ್ಲ ಕಮಾಡಿಟೀಸ್‌ನ್ನೂ ಮಾರಾಟಮಾಡುತ್ತಾ ಎಲ್ಲ ರೀತಿಯ ಆಕ್ಟಿವಿಟೀಸ್‌ನ್ನೂ ಮಾಡುತ್ತಾ ಬಂದಿರುವುದು. ಹುಬ್ಬಳ್ಳಿ, ಗದಗ, ಮುಂತಾದುವುಗಳಲ್ಲಿನ ಸಂಘಗಳನ್ನು ತಾವು ಪ್ರಾಹಿಬಿಟ್ ಮಾಡಿದ್ದೀರಿ. ಆದನ್ನು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಎಂದು ಹೇಳುವುದಕ್ಕೆ ಏನು ಆಧಾರ ಇದೆ ? ಇವು ಬೇರೆ ಮಾರ್ಕೆಟಿಂಗ್ ಸೊಸೈಟಿಗಳನ್ನು ಪೂಲ್ ಮಾಡುತ್ತವೆ. ಅಗ್ರಿಕಲ್ಚರಲ್ ಕಮಾಂಡಿಟೀಸ್‌ನ್ನು ಮಾರಾಟ ಮಾಡುತ್ತವೆ. ನೀವೂ ಕೂಡ ತಾಲ್ಲೂಕು ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಸೊಸೈಟಿ ಎಂದು ಷೇರು ಹಣವನ್ನು ಕೊಟ್ಟಿದ್ದೀರಿ. ಎನ್.ಸಿ.ಡಿ.ಸಿ. ಯವರೂ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಕಕ್ಷೆಯಲ್ಲಿ ಬರತಕ್ಕ ನಫೆಡ್ ಮುಂತಾದ ಇನ್‌ಸ್ಟಿಟ್ಯೂಷನ್‌ಗಳೂ ಕೂಡ ಇವತ್ತು ಅವುಗಳನ್ನೇ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳೆಂದು ಗ್ರಹಿಸುತ್ತಿವೆ. ದುರ್ದೈವದಿಂದ ನಮ್ಮ ರಾಜ್ಯದಲ್ಲಿ ಇದನ್ನು ಯಾವ ಉದ್ದೇಶಕ್ಕಾಗಿ ಬದಲಾವಣೆ ಮಾಡಿದ್ದೀರಿ, ಇದನ್ನು ಚುನಾವಣಾ ಪಟ್ಟಿಗಾಗಿ ಮಾಡಿದ್ದೀರಾ ? ಸಾಮಾನ್ಯವಾಗಿ ನೀವು ಮಾಡಿಯೇ ಮಾಡುತ್ತೀರಿ, ನೀವು ಮಾಡುವುದಕ್ಕೆ ನಮ್ಮ ತಕರಾರು ಏನೂ ಇಲ್ಲ. ನಾವು ಇಲ್ಲದಿದ್ದರೂ ನೀವು ೭-೮ ಜನಗಳನ್ನು ನಾಮಿನೇಟ್ ಮಾಡಿಯೇ ಮಾಡುತ್ತೀರಿ. ಆದರೆ ಚುನಾವಣೆಯನ್ನು ಬಿಟ್ಟು ಮಾಡುವುದಾದರೆ ವ್ಯವಸಾಯಗಾರರಿಗೆ ಮಹಾ ಗಂಡಾಂತರವಾಗುತ್ತದೆ. ನಿಮ್ಮಿಂದ ಅದು ಆಗಬಾರದು. ರಚನಾತ್ಮಕವಾಗಿ ವಿಚಾರಮಾಡಲು ನೀವು ತಯಾರುಇದ್ದೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ, ನಾವು ಇದನ್ನು ಬಹಳ ಮುಖ್ಯವಾದ ಉದ್ದೇಶದಿಂದ ಮಾಡಿದೆವು. ತಾವೂ ಕೂಡ ಕೆಲವು ದಿವಸ ಸ್ಪೆಷಲ್ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ಅಧ್ಯಕ್ಷರಾಗಿದ್ದೀರಿ. ಮಾನ್ಯ ಕೆ. ಹೆಚ್. ಪಾಟೀಲ್‌ರವರೂ ಕೂಡ ವಿಚಾರವನ್ನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದರೂ ಅವರು ಏತಕ್ಕೆ ಈ ಪ್ರಶ್ನೆಯನ್ನು ಕೇಳಿದರೋ ನನಗೆ ಗೊತ್ತಿಲ್ಲ. ಮಾರ್ಕೆಟಿಂಗ್ ಫೆಡರೇಷನ್‌ನ ಷೇರು ಬಂಡವಾಳ ೨೦ ಲಕ್ಷ ರೂಪಾಯಿ. ನಾವು ಕೊಟ್ಟಿರತಕ್ಕದ್ದು ೫.೮ ಕೋಟಿ ರೂಪಾಯಿ. ಅಲ್ಲಿ ವ್ಯವಹಾರ ಮಾಡಿರುವವರಿಗೆ ಏನು ಕೆಲಸ. ಅವರಿಗೂ, ಇವರಿಗೂ ಯಾವುದೇ ಕನೆಕ್ಷನ್ನೂ ಇಲ್ಲದಿವ್ವರೆ, ಇವರ ಹತ್ತಿರ ಅವರು ವ್ಯವಹಾರ ಮಾಡದಿದ್ದರೆ ಅವರು ಡೈರೆಕ್ಟರ್‌ಗಳಾಗಿ ಬಂದು ಕೂತುಕೊಂಡು ಏನು ಕೆಲಸತಾನೆ ಮಾಡುತ್ತಾರೆ ? ಇದನ್ನು ತಪ್ಪಿಸುವ ಉದ್ದೇಶದಿಂದ ನಾವು ಇದನ್ನು ಮಾಡಿದ್ದೇವೆ. ಇದರ ಜೊತೆಗೆ ನಾವು ಇನ್ನೂ ಒಂದು ಡೈರೆಕ್ಷನ್‌ನ್ನು ಕೊಟ್ಟಿದ್ದೇವೆ. ಯಾವ ಮಾರ್ಕೆಟಿಂಗ್ ಸಹಕಾರ ಸಂಘ ವರ್ಷಕ್ಕೆ ೫ ಲಕ್ಷ ರೂಪಾಯಿಗಳಷ್ಟು ವ್ಯಾಪಾರವನ್ನು ಮಾರ್ಕೆಟಿಂಗ್ ಫೆಡರೇಷನ್‌ನ ಜೊತೆಯಲ್ಲಿ ಮಾಡುವುದಿಲ್ಲವೋ ಅವರು ಅಲ್ಲಿ ಸದಸ್ಯರಾಗಿ ಮುಂದುವರಿಯುವುದಕ್ಕೆ ಸಾಧ್ಯ ಇಲ್ಲ. ಅವರು ಬೋರ್ಡ್‌ನಲ್ಲಿದ್ದರೂ ಹೊಗಬೇಕೆಂದು they should relinguish the office ಎಂದು ನಾನು ಈಗಾಗಲೇ ಡೈರೆಕ್ಷನ್ ಕೊಟ್ಟು ಅಮೆಂಡ್‌ಮೆಂಟ್ ಮಾಡಬೇಕೆಂದು ಹೇಳಿದ್ದೇನೆ. ಈ ಒಂದು ಮುಖ್ಯ ಉದ್ದೇಶವನ್ನು ನಾವು ಇಟ್ಟುಕೊಂಡು ಇದನ್ನು ಮಾಡಿದ್ದೇವೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ. ಇದನ್ನು ತಾವೂ ಕೂಡ ಒಪ್ಪುತ್ತೀರಿ. ಫೆಡರೇಷನ್ ಎಂದು ಆನ್ನಿಸಿಕೊಳ್ಳುವುದಕ್ಕೆ ಅದು ಲಾಯಕ್ಕಲ್ಲ. ೧೭೮ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಕೇವಲ ೩೦-೪೦ ಸೊಸೈಟಿಗಳನ್ನು ಬಿಟ್ಟರೆ ಉಳಿದವು ಯಾವುವೂ ಕೂಡ ಈ ಫೆಡರೇಷನ್‌ನ ಜೊತೆಯಲ್ಲಿ ಸಂಬಂಧವನ್ನು ಇಟ್ಟುಕೊಂಡಿಲ್ಲ. ಇದಕ್ಕೆ ಬದಲಾಗಿ ಸರ್ಕಾರಿ ಫೆಡರೇಷನ್‌ನೇನಾವು ನಡೆಸಬಹುದು ಇದನ್ನು ಸಹಕಾರಿ ಎಂದು ಏತಕ್ಕೆ ಕರೆಯಬೇಕು ? ಇದನ್ನು ಸಹಕಾರಿ ಫೆಡರೇಷನ್ ಎಂದು ಮಾಡಬೇಕೆಂಬ ಉದ್ದೇಶದಿಂದಲೇ ನಾವು ಈ ಕಾನೂನನ್ನು ಬದಲಾವಣೆ ಮಾಡಿದ್ದೇವೆ. ಇದರಲ್ಲಿ ಅಲ್ಲಿ, ಇಲ್ಲಿ ಸ್ವಲ್ಪ ಪುಟ್ಟಿಗೆ ಬದಲಾವಣೆ ಆಗಿರಬಹುದು. ಆದರೆ ಮಾನ್ಯ ಪಾಟೀಲ್‌ರವರು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿರುವುದು ತಾಲ್ಲೂಕು ಹತ್ತಿ ಮಾರಾಟ ಸಹಕಾರ ಸಂಘ ಎಂದು ರಿಜಿಸ್ಟರ್ ಆಗಿದೆ. ಅದು ಬೇರೆ ವ್ಯವಹಾರಗಳನ್ನು ಮಾಡುತ್ತಿರಬಹುದು. ಆದರೆ ನಾನ್ ಅಗ್ರಿಕಲ್ಚರಲ್ ಆದರಲ್ಲಿ ಬರುವುದಿಲ್ಲವೆಂದು ತಿಳಿದಿದ್ದೇವೆ. ಇದನ್ನು ನಾವು ಪರಿಶೀಲಿಸುತ್ತೇವೆ.

ಶ್ರೀ ಕೆ.ಪೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಬಹಳ ಪ್ರಾಮಾಣಿಕವಾಗಿ ಹೇಳಿದ್ದಾರೆ. ಅವರ ಉದ್ದೇಶ ಯಾರಾದರೂ ಒಬ್ಬರನ್ನು ದೂರೀಕರಿಸಬೇಕೆಂದು ಇದ್ದರೆ ಅದಕ್ಕೆ ನಾನು ಅಡ್ಡಿ ಬರುವುದಿಲ್ಲ ಏತಕೆಂದರೆ ಸರ್ಕಾರಿ ಚಳುವಳಿಯಲ್ಲಿ ಯಾರಾದರೂ ಅಡ್ಡಿ ಬಂದರೆ ಅವರನ್ನು ಹೊರಹಾಕಲಿ. ಗದಗ್ ಬೆಟಗೇರಿ ಅದು ನನ್ನ ಕ್ಷೇತ್ರ, ಕೆ. ಪೆಚ್. ಪಾಟೀಲ್ ಬರಬಾರದು ಎಂದು ಮಾಡಿದ್ದರೂ ಪರವಾಗಿಲ್ಲ. ಆದರೆ ಎಸ್. ಆರ್. ಪಾಟೀಲ್‌ರವರು ಬಹಳ ದೊಡ್ಡ ಮನುಷ್ಯರು ಕಟ್ಟಿದಂತಹ ಸೊಸೈಟಿ. ಅದಕ್ಕೆ ನಿಮ್ಮವರೇ ಆದ ಮಾನ್ಯ ಶಿವನಗೌಡರವರು ಚೇರ್‌ಮೆನ್ ಆಗಿರುತ್ತಾರೆ. ಹುಬ್ಬಿ ಸೊಸೈಟಿಯಲ್ಲಿ ಹತ್ತಿ ಒಂದೇ ಮಾರಾಟ ಮಾಡುತ್ತಿಲ್ಲ. ಅಲ್ಲಿ ಎಲ್ಲ ರೀತಿಯದು ಮಾರಾಟ ಮಾಡುತ್ತಾರೆ. ಇದು ಮಾನ್ಯ ಅಧ್ಯಕ್ಷರಿಗೂ ಗೊತ್ತಿರುವ ವಿಚಾರ. ಇಂಥ ಅನೇಕ ಸಂಘಗಳನ್ನು ಬಿಟ್ಟು ಬಿಟ್ಟಿರುತ್ತಾರೆ. ಈಪತ್ತು ನೀವು ಹೇಳಿದಂತೆ, ನಿಮ್ಮ ವ್ಯಾಖ್ಯಾನದಂತೆ ಪುನರ್ ಪರಿಶೀಲನೆ ಮಾಡಿ. ಏತಕ್ಕೆಂದರೆ ಯಾವ ಯಾವ ಸಂಘಗಳು ನಿಜವಾಗಿಯೂ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯ ಕಾರ್ಯಕ್ಷೇತ್ರದಲ್ಲಿ ಬರುತ್ತವೆ ಅಂಥ ಸಂಘಗಳನ್ನು ಪುನರ್ ಪರಿಶೀಲನೆ ಮಾಡಿ. ಹತ್ತು ಲಕ್ಷಕ್ಕಿಂತ ಕಡಿಮೆ ವ್ಯವಹಾರ ಯಾರು ಇರುತ್ತಾರೋ ಅಂಥವರನ್ನು ಸ್ಪೆಟ್ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ ಮೆಂಬರಾಗಿ ಇಡಬೇಡಿರಿ. ಏತಕ್ಕೆಂದರೆ ಹತ್ತು ಲಕ್ಷಕ್ಕೆ ಕಿಮ್ಮತ್ತು ಇಲ್ಲ. ಹಿಂದಿನ ಐದು ಸಾವಿರ ಈಪತ್ತು ಹತ್ತು ಸಾವಿರವಾಗಿದೆ. ಆದ್ದರಿಂದ ೧೦ ಲಕ್ಷಕ್ಕಿಂತ ಯಾರು ಹೆಚ್ಚು ವ್ಯವಹಾರವನ್ನು ಇಟ್ಟುಕೊಂಡಿರುತ್ತಾರೋ ಅಂಥವರನ್ನು ಮೆಂಬರ್ ಆಗಿ ಇಟ್ಟುಕೊಳ್ಳುವ ಬಗ್ಗೆ ಪುನರ್ ಪರಿಶೀಲನೆ ಮಾಡಲು ಮಾನ್ಯ ರಿಜಿಸ್ಟ್ರಾರ್‌ರವರಿಗೆ ಆದೇಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ.—ಇದನ್ನು ಯೋಚನೆ ಮಾಡುತ್ತೇನೆ.

ಭೂಸನೂರ ಗ್ರಾಮದಲ್ಲಿ ಪ್ರಾರಂಭವಾಗುವ ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆ

೬(೧೦೪) ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗ).—ಮಾನ್ಯ ಸಹಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಆಳಂದ ತಾಲ್ಲೂಕಿನಲ್ಲಿ ಭೂಸನೂರ ಗ್ರಾಮದಲ್ಲಿ ಪ್ರಾರಂಭವಾಗುವ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಯಾಚರಣೆಯನ್ನು ಎಂದಿನಿಂದ ಪ್ರಾರಂಭವಾಗುವ ನಿರೀಕ್ಷೆ ಇದೆ ?

ಆ) ಸದರಿ ಕಾರ್ಖಾನೆಯ ನಿರ್ಮಾಣ ಕಾರ್ಯ ಯೋಜನೆ ಪ್ರಕಾರ ನಡೆದಿದ್ದರೆ ಸಕ್ಕರೆ ಉತ್ಪಾದನೆ ಎಂದು ಆಗಬೇಕಾಗಿತ್ತು, ಹಾಗಿದ್ದಲ್ಲಿ ವಿಳಂಬವಾಗಲು ಕಾರಣಗಳೇನು ?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಸದರಿ ಸಕ್ಕರೆ ಕಾರ್ಖಾನೆಯು ತನ್ನ ಕಬ್ಬು ನುರಿಯುವ ಕಾರ್ಯವನ್ನು ೧೯೮೭–೮೮ನೆಯ ಕಬ್ಬು ನುರಿಯುವ ಋತುಕಾಲದಲ್ಲಿ ಅಂದರೆ ೧೯೮೭ ನವೆಂಬರ್ ತಿಂಗಳಲ್ಲಿ ಪ್ರಾರಂಭಿಸುವ ನಿರೀಕ್ಷೆ ಇದೆ.

ಆ) ಈ ಕಾರ್ಖಾನೆಗೆ ಯಂತ್ರೋಪಕರಣಗಳು ಸರಬರಾಜು ಮಾಡುವವರಾದ ಮೆ॥ ಆನಂದ ಟ್ರ್ಯಾಂಕ್ ಮತ್ತು ವೆಸಲ್ಸ್ ಪ್ರೈ ಲಿ. ಮುಂಬಯಿ ಇವರೊಡನೆ ದಿನಾಂಕ ೧೦-೧೦-೧೯೮೫ರಂದು ಒಪ್ಪಂದ ಆಗಿದ್ದ ಪ್ರಕಾರ ಸದರಿ ಕಾರ್ಖಾನೆಯು ತನ್ನ ಪ್ರಾಯೋಗಿಕ ಕಬ್ಬು ನುರಿಸುವ ಕಾರ್ಯವನ್ನು ದಿನಾಂಕ ೧೦–೧೨–೧೯೮೬ರಲ್ಲಿ ಪ್ರಾರಂಭಿಸಬೇಕಾಗಿತ್ತು. ಆದರೆ ಈ ಕೆಳಗೆ ನೀಡಿರುವ ಕಾರಣಗಳಿಂದಾಗಿ ಪ್ರಾಯೋಗಿಕ ಕಬ್ಬು ನುರಿಸುವ ಕಾರ್ಯವನ್ನು ಪ್ರಾರಂಭಿಸುವುದರಲ್ಲಿ ವಿಳಂಬವಾಗಿದೆ.

೧) ಮುಖ್ಯವಾಗಿ ಕಾರ್ಖಾನೆಯು ದಿನಾಂಕ ೨೦–೮–೧೯೮೪ರಂದು ಮಾಡಿಕೊಂಡ ಸಾಲದ ಆರ್ಜಿಯನ್ನು ಭಾರತೀಯ ಔದ್ಯೋಗಿಕ ಅಭಿವೃದ್ಧಿ ಬ್ಯಾಂಕ್ ಮುಂಬಯಿ ಅವರು ದಿನಾಂಕ ೧೩–೮–೮೬ರಂದು ಮಂಜೂರು ಮಾಡಿದ್ದಾರೆ. ಈಗ ಕಾರ್ಖಾನೆಯು ಭಾರತೀಯ ಔದ್ಯೋಗಿಕ ಅಭಿವೃದ್ಧಿ ಬ್ಯಾಂಕ್ ಇವರೊಡನೆ ತೆಗೆದುಕೊಳ್ಳಬೇಕಾದ ಔಪಚಾರಿಕ ಸಾಂಪ್ರದಾಯಿಕ ಕಾರ್ಯಗಳನ್ನು ಮುಗಿಸುವುದರ ಬಗ್ಗೆ ನಡವಳಿಗಳನ್ನು ತೆಗೆದುಕೊಂಡಿರುತ್ತದೆ ಮತ್ತು ಆಷ್ಟು ಶೀಘ್ರದಲ್ಲಿ ಮಂಜೂರು ಆಗಿರುವ ಸಾಲದ ಹಣವನ್ನು ಪಡೆಯುವ ನಿರೀಕ್ಷೆ ಇದೆ.